ಮಯೂರ ವಿಶೇಷ

ಶತಮಾನದ ನಮನ

# ಶಾಂತರಸ ಮೈದಾಳಿ ಶಾಂತರಸರಾಗಿ...

## ಹಿರೇಮಠದ ಶಾಂತಯ್ಯಸ್ವಾಮಿ ಹೆಂಬೇರಾಳು

(07.04.1924 - 13.04.2008)



ಮಹಾಂತೇಶ ನವಲಕಲ್

ಶಾಂತರಸರೆಂದರೆ ನಿಷ್ಠುರತೆ, ಬೆಂಕಿ ಎನ್ನುವುದು ಅವರೊಂದಿಗೆ ಒಡನಾಡಿದವರ ಅನುಭವ. ಅಂತರಂಗದಲ್ಲಿ ಅದಮ್ಯ ಮಾನವೀಯತೆಯನ್ನು ಹೊಂದಿದ್ದ ಭಾವನಾತ್ಮಕ ಜೀವವದು. ಅವರ ನಿಷ್ಠುರತೆ, ಕೋಪ ವಿನಾಕಾರಣ ಇರುತ್ತಿರಲಿಲ್ಲ. ಶಾಂತರಸರ ನಿಷ್ಠುರತೆಯ ಬಿಸಿ ಮೊದಲಿಗೆ ತಾಕಿದ್ದು ಅವರ ತಂದೆಯವರಿಗೆ. ಅವರು ಸಂಸ್ಕೃತ ಪಂಡಿತರಾಗಿದ್ದರು. ಜ್ಯೋತಿಷ್ಯಶಾಸ್ತ್ರ ವಿಶಾರದರಾಗಿದ್ದರು. 'ಸುಳ್ಳು ಜ್ಯೋತಿಷ್ಯ ಹೇಳುವುದನ್ನು ಬಿಡು' ಎಂದು ತಂದೆಗೆ ಮೆಲ್ಲಗೆ ಜಂಕಿಸಿದ್ದರು ಶಾಂತರಸರು.

ಶಾಂತರಸರು ಭಾಲ್ಕಿಯ ಹಿರೇಮಠದ ಚನ್ನಬಸವ ಪಟ್ಟದ್ದೇವರ ಹೆಸರು ತೆಗೆದರೆ ಭಾವುಕರಾಗುತ್ತಿದ್ದರು. ಭಾಲ್ಕಿಯ ಮಠ ಆಶ್ರಯ ಕೊಡದಿದ್ದರೆ, ತಾವು ಯಾವುದಾದರೂ ಗೌಡರ ಮನೆಯಲ್ಲಿ ನೀರು ತರುವ ಕೆಲಸ ಮಾಡಬೇಕಾಗಿತ್ತು ಎಂದು ಹೇಳುತ್ತಿದ್ದರು. ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಗಳನ್ನು ಬದುಕಿನ ಭಾಗವಾಗಿಸಿಕೊಂಡ ಚನ್ನಬಸವ ಪಟ್ಟದ್ದೇವರಿಗೂ ಶಾಂತರಸರನ್ನು ಕಂಡರೆ ಅದೇನೋ ವಾತ್ಸಲ್ಯ. ತಮ್ಮ ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದರು. ಆ ವಾತ್ಸಲ್ಯಪಥದ ಕಾರಣದಿಂದಾಗಿಯೇ ಚನ್ನಬಸವ ಪಟ್ಟದ್ದೇವರ ಗೌರವಾರ್ಥ ಶಾಂತರಸರು 'ಕಾಯಕ ಪರಿಣಾಮಿ' ಎನ್ನುವ ಗ್ರಂಥವನ್ನು ಹೊರತಂದರು.

ಕ್ರಿಯಾಶೀಲವಾದ ವಿಶ್ವವಿದ್ಯಾಲಯವೊಂದರ ಒಂದು ವಿಭಾಗ ಮಾಡುವಷ್ಟು ಕೆಲಸವನ್ನು ಶಾಂತರಸರು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಮಾಡಿದರು. ಕನ್ನಡದಲ್ಲಿ ಛಂದೋಬದ್ಧ ಗಜಲ್‌ಗಳನ್ನು ಮೊದಲು ಬರೆದ ಕೀರ್ತಿ ಅವರದು. ಆ ಕಾರಣದಿಂದಲೇ ಅವರಿಗೆ 'ಕನ್ನಡದ ಗಜಲ್ ಪಿತಾಮಹ' ಎನ್ನುವ ವಿಶೇಷಣ. ಅವರ ಸಂಶೋಧನೆಗಳಂತೂ ಬಹುವಾಜಮೀಯ ಮಾದರಿಯಲ್ಲಿ ಇರುವಂತಹವು. ಅವರ ಸಂಶೋಧನಾ ಗ್ರಂಥ 'ಉಲಿವ ಮರ'ದಲ್ಲಿ ಅವರು ಪ್ರಸ್ತಾಪಿಸಿದ